OS 318/2022
ಪಿಡಬ್ಲೂ-1

ದಿಃ 04-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ. ಆರ ಬಿ ಎಸ ವಕೀಲರಿಂದಃ**

ಸಾಕ್ಷಿಗೆ ಮರಾಠಿ ಭಾಷೆ ಬಿಟ್ಟು ಬೇರೆ ಭಾಷೆ ಬರದ ಕಾರಣ ಶ್ರೀಮತಿ ಆರ ಎಲ್ ಯೂ ವಕೀಲರನ್ನು ಭಾಷಾ ತರ್ಜುಮೆದಾರರನ್ನಾಗಿ ನೇಮಕ ಮಾಡಿಕೊಂಡು ಅವರಿಗೂ ಸಹ ಪ್ರಮಾಣ ವಚನ ಬೋದಿಸಲಾಯಿತು.

ಈ ಕೇಸನಲ್ಲಿ ಪ್ರತಿವಾದಿ ನಂಬರ 1 ರಿಂದ 7 ಏನೂ ತಕರಾರು ಹಾಕಿದ್ದಾರೆ ಎಂದು ಗೊತ್ತು. ದಾವಾ ಸರ್ವೆ ನಂಬಗಳನ್ನು ನಮ್ಮ ತಂದೆ ಖರೀದಿಸಿದ್ದರೂ ಎಂದರೆ ಸರಿ. ಎರಡು ಕೃಷಿ ಜಮೀನುಗಳನ್ನು ನನ್ನ ತಂದೆ ಖರೀದಿಸಿದ್ದರೂ. ಅವರು ಬದುಕಿರುವವರೆಗೂ ಅವರ ಹೆಸರನಲ್ಲಿ ಇದ್ದವು.

ಶೆಡ್ಯೂಲ್-ಬಿ ಆಸ್ತಿಗಳು ನಮ್ಮ ತಂದೆಯ ಹೆಸರಿನಲ್ಲಿದ್ದವು. ಈಗಲೂ ಅವರ ಹೆಸರಿನಲಲ್ಲಿ ಇವೆ ಎಂದರೆ ಸರಿ. ಅವುಗಳಲ್ಲಿ ಸಂಬಂಧಿಸಿದಂತೆ ಪಾಲು ವಿಭಾಗಗಳು ಆಗಿಲ್ಲ ಎಂದರೆ ಸರಿ.

ನನ್ನ ತಂದೆ ಬದುಕಿದ್ದಾರೆ ಸರ್ವೆ ನಂಬರ 653 ನ್ನು 4 ವಿಭಾಗಗಳನ್ನಾಗಿ ಮಾಡಿದ್ದರು ಎಂದರೆ ಸರಿ. ಪ್ರಭಾಕರ, ಬಾಸ್ಕರ ಮತ್ತು ದಿನಕರ ಮತ್ತು ನನಗೆ ತಲಾ ¼ ಭಾಗ ನೀಡಿದ್ದರು ಎಂದರೆ ಸರಿ. ಸದರಿ ವಿಭಾಗದಂತೆ ನಾವು ಸದರಿ

OS 318/2022
ಪಿಡಬ್ಲೂ-1

ಆಸ್ತಿಯಲ್ಲಿ ಪ್ರತ್ಯೇಕ ವಾಗಿ ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿ. ಸದರಿ ವಿಭಾಗ ವನ್ನು ನನ್ನ ತಂದೆ ಉತ್ತರ ದಕ್ಷಿಣ ಪಟ್ಟಿಗಳನ್ನಾಗಿ ಮಾಡಿ ಪಶ್ಚಿಮದ ಪಟ್ಟಿಯನ್ನು ಪ್ರಭಾಕರರಿಗೆ ಅದರ ನಂತದ ಪಟ್ಟಿಯನ್ನು ಭಾಸ್ಕರ ಮತ್ತು ಅದರ ನಂತರದ ಪಟ್ಟಿಯನ್ನು ದಿನಕರ ಮತ್ತು ಪೂರ್ವದ ಪಟ್ಟಿಯನ್ನು ನನಗೆ ನೀಡಿದ್ದರೂ ಎಂದರೆ ಸರಿ. ನನಗೆ ಬಂದ ಪಟ್ಟಿ ಸುಮಾರು ಇರುದರಿಂದ ನನಗೆ ಹೆಚ್ಚಿನ ವೀಸ್ತೀರ್ಣ ನೀಡಿದ್ದಾರೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನಾವು 4 ಜನ ಸಹೋದರ ಮತ್ತು ಸಹೋದರಿಯರು ಸೇರಿ ಸದರಿ ಪಾಲು ವಿಭಾಗದಂತೆ ಬರವಣಿಗೆ ಮಾಡಿಕೊಂಡೇವು ಎಂದರೆ ಸರಿ. ಈಗ ತೋರಿಸುತ್ತಿರುವ ಡೀಡ್ ಆ ಬರವಣಿಗೆ ಪತ್ರ ಎಂದರೆ ಸರಿ ಅದನ್ನು ಅಭಿಮುಖವಾಗಿ ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ -1 ಕ್ಕೆ ನನ್ನ ಸಹಿ ಇದೆ ಎಂದರೆ ಸರಿ. ಉಳಿದ ನನ್ನ ಸಹೋದರ ಸಹೋದರಿಯರ ಸಹಿ ಇದೆ ಎಂದರೆ ಸರಿ. ಸದರಿ ನನ್ನ ತಂದೆ ಮಾಡಿಕೊಟ್ಟ ಪಾಲು ವಿಭಾಗದಂತೆ ನಾವು ಆ ಜಮೀನಿನಲ್ಲಿ ಪ್ರತ್ಯೇಕವಾಗಿ ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿ.

OS 318/2022
ಪಿಡಬ್ಲೂ-1

ಸರ್ವೆ ನಂಬರ 273/13 ಕೇವಲ 18 ಗುಂಟೆ ಜಮೀನು ಇರುವುದರಿಂದ ಅದನ್ನು ಈ ವೆಎಃಲೆ ಹೇಳಿದ ಪಾಲು ವಿಭಾಗದಲ್ಲಿ ಪಾಲು ಮಾಡಿಲ್ಲ ಎಂದರೆ ಸರಿ. ನನ್ನ ತಂದೆ ಆ ಆಸ್ತಿಯನ್ನು ಎಲ್ಲಾ ಗಂಡು ಮಕ್ಕಳಿಗೆ ಜಂಟಿ ಆಗಿ ಇಟ್ಟಿದ್ದರೂ ಎಂದರೆ ಸರಿ. ಸರ್ವೆ ನಂಬರ 653 ವಿಭಾಗ ಆದ ನಂತರ ನಮಗೆ ಬಂದ ಪಟ್ಟಿಯಲ್ಲಿ ನಾವು ಅಭಿವೃದ್ದಿ ಪಡಿಸಿ ಉಳುಮೆ ಮಾಡತ್ತಿದ್ದೇವೆ ಎಂದರೆ ಸರಿ .

**8 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ ಪಾಟೀ ಸವಾಲು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು,ಚಿಕ್ಕೋಡಿ

(ಸಾಕ್ಷಿಗೆ ಕನ್ನಡದಲ್ಲಿ ಕೇಳಿದ ಪ್ರಶ್ನೇಗಳನ್ನು ಮರಾಠಿ ಭಾಷೆಯಲ್ಲಿ ತರ್ಜುಮೆ ಮಾಡಿ ಹೇಳಿ, ಸಾಕ್ಷಿ ಮಾರಾಠಿ ಭಾಷೆಯಲ್ಲಿ ನೀಡಿದ ಉತ್ತರವನ್ನು ಯಥವತ್ತಾಗಿ ಕನ್ನಡ ಭಾಷೆಗೆ ತರ್ಜುಮೆ ಮಾಡಿರುವುದಾಗಿ ಈ ಮೂಲಕ ದೃಡಿಕರಿಸುತ್ತೇನೆ)

ಮಾನ್ಯ ತರ್ಜುಮೆದಾರರ ವಕೀಲರ ಸಹಿ